

ಇಡೀ ರಾತ್ರಿಯ ಟ್ರೈನಿನ ಪ್ರಯಾಣವನ್ನು ಮುಗಿಸಿ ಬಹಳ ಸಂಭ್ರಮದಿಂದ ಊರಿನಲ್ಲಿ ಇಳಿದಿದ್ದ. ರಾತ್ರಿಯಿಡೀ ಅಕ್ಕ ಪಕ್ಕದವರ ಗಲಾಟೆಯಿಂದಾಗಿ ಸರಿಯಾಗಿ ನಿದ್ದೆ ಮಾಡಲು ಸಾಧ್ಯವಾಗದಿದ್ದರೂ ಬೆಳಗಿನ ಜಾವ ಚೆನ್ನಾಗಿ ನಿದ್ದೆ ಹತ್ತಿತ್ತು. ಬಹುಶಃ ರಾತ್ರಿಯಿಡೀ ಮಾಡಿದ ಗಲಾಟೆಯಿಂದಲೋ ಏನೋ ಉಳಿದವರೂ ಸುಸ್ತಾದವರಂತೆ ಮಲಗಿದ್ದರು. ಹಾಗಾಗಿ ಇವನಿಗೆ ಚೆನ್ನಾಗಿ ನಿದ್ದೆ. ಕೈಯಲ್ಲಿ ಕಟ್ಟಿಕೊಂಡ ಲೇಟೆಸ್ಟ್ ವಾಚಿನಲ್ಲಿನ ಅಲಾರಾಂ ಇಲ್ಲದಿದ್ದರೆ ಇವನಿಗೂ ಎಚ್ಚರವಾಗುತ್ತಿತ್ತೋ ಇಲ್ಲವೋ. ಅಲಾರಾಂ ಹೊಡೆದದ್ದೇ ಗಡಬಡಿಸಿ ಎದ್ದು ಹೊರಗೆ ಇಣಕಿದರೆ ಅವನ ಊರು ಸಮೀಪಿಸುತ್ತಿದ್ದುದರ ಕುರುಹು ಕಾಣಿಸಿತ್ತು. ಅವೇ ಮಳೆಗಾಲದಲ್ಲಿ ಹಸಿರು ಪೈರಿನಿಂದ ಕಂಗೊಳಿಸುತ್ತಿದ್ದ ಗದ್ದೆಗಳು ಈಗ ನೀರಿನ ಪಸೆಯಿಲ್ಲದೆ ಒಡೆದು ಬಾಯಿಬಿಟ್ಟಿದ್ದವು. ಎಲೆಗಳನ್ನೆಲ್ಲ ಉದುರಿಸಿಕೊಂಡು ಮುಂಬರುವ ಮಳೆಗಾಲದಲ್ಲಿ ಚಿಗುರಬೇಕೆಂಬ ತಮ್ಮ ಕನಸುಗಳನ್ನು ಜೀವಂತವಾಗಿಟ್ಟುಕೊಂಡ ಮರಗಳು. ಅವುಗಳ ಹಿಂದಿನಲ್ಲಿ ರೈಲಿನ ವೇಗದೊಂದಿಗೇ ಓಡುತ್ತಿದ್ದ ಬೆಟ್ಟಗಳ ಸಾಲು. ಇನ್ನೊಂದಿಷ್ಟು ಹೊತ್ತಿನಲ್ಲಿಯೇ ತಾನಿಳಿಯುವ ಜಾಗ ಬರುತ್ತದೆ ಎನ್ನುವ ಅನಿಸಿಕೆಯೇ ಅವನಲ್ಲಿ ಲವಲವಿಕೆಯನ್ನು ಹುಟ್ಟಿಸಿತ್ತು.

ಅಂತಹ ದೊಡ್ಡದೇನೂ ಅಲ್ಲದ ತನ್ನೂರಿನ ಸ್ಟೇಶನ್ನಿನಲ್ಲಿ ಮುಖ ತೊಳೆಯಲು ನೀರಿನ ವ್ಯವಸ್ಥೆಯಿದೆಯೋ ಗೊತ್ತಿಲ್ಲ. ಮೊದ ಮೊದಲು ಲೋಕಲ್ ಟ್ರೈನುಗಳಲ್ಲೂ ಕೆಲವು ಮಾತ್ರ ನಿಲ್ಲುತ್ತಿದ್ದ ಈ ಸ್ಟೇಶನ್ನಿನಲ್ಲಿ ಇತ್ತೀಚೆಗಷ್ಟೆ ಊರಿನ ಒಂದಿಷ್ಟು ಮಂದಿ ಸೇರಿ ಕಟ್ಟಿಕೊಂಡ ರೈಲ್ವೇ ಪ್ರಯಾಣಿಕರ ಹೋರಾಟ ಸಮಿತಿಯ ವತಿಯಿಂದ ಪ್ರದರ್ಶನ, ಧರಣೆ, ಹೋರಾಟಗಳನ್ನು ನಡೆಸಿ ಎಲ್ಲಾ ಲೋಕಲ್ಲುಗಳಷ್ಟೆ ಅಲ್ಲ, ಕೆಲವೊಂದು ಎಕ್ಸ್‌ಪ್ರೆಸ್ ಟ್ರೈನುಗಳೂ ನಿಲ್ಲುವಂತೆ ಮಾಡಿದ್ದರು. ರಾತ್ರಿಯಿಡೀ ಪಯಣಿಸಿದ ಹಾಳು ಮುಖದಲ್ಲಿ ಊರಿಗೆ ಹೋಗುವುದೇ... ಕೂಡಲೇ ಟಾಯ್ಲೆಟ್ಟಿಗೆ ಹೋಗಿ ಮುಖವನ್ನೊಂದಿಷ್ಟು ತೊಳೆದುಕೊಂಡ. ತಲೆ ಬಾಚಿಕೊಳ್ಳುವ ಶಾಸ್ತ್ರವನ್ನೂ ಮುಗಿಸಿದ. ಕಷ್ಟಪಟ್ಟು ಪಡೆದುಕೊಂಡ ಏಸೀ ಕೋಚಿನಲ್ಲಿ